(ಸಾಕ್ಷಿಯನ್ನು ದಿಃ 25-9-2019 ರಂದು ಕರೆಸಿ ಪ್ರಮಾಣ ವಚನ ಬೋಧಿಸಿ ಪಾಟಿ ಸವಾಲಿಗೆ ಒಳಪಡಿಸಲಾಯಿತು. )

**ಪಾಟಿ ಸವಾಲುಃ 1 ರಿಂದ 4, 9, 11 ಎ,11 ಬಿ ಮತ್ತು 13 ನೇ ಪ್ರತಿವಾದಿ ಪರವಾಗಿಃ ಶ್ರೀ ಎಸ್ ವಾಯ್ ಎಸ್ ವಕೀಲರಿಂದಃ**

ದಾವೆಯನ್ನು ಸಲ್ಲಿಸಲು ವಕೀಲರಿಗೆ ನಾನೇ ಮಾಹಿತಿಯನ್ನು ಕೊಟ್ಟಿರುತ್ತೇನೆ. ದಾವೆ ಸಲ್ಲಿಸುವ ಕಾಲಕ್ಕೆ ಈ ದಾವೆಯಲ್ಲಿ ನಾನು ವಾದಿಯಾಗಿರಲಿಲ್ಲ ಎಂದರೆ ನಿಜ. ಸಾಕ್ಷಿಯು ಮುಂದುವರೆದು ದಾವೆಯನ್ನು ನಮ್ಮ ತಾಯಿ ಹಾಕಿರುತ್ತಾರೆ ಎಂದು ನುಡಿದಿರುತ್ತಾರೆ. ದಾವೆಯನ್ನು ಸಲ್ಲಿಸಲು ನಮ್ಮ ವಕೀಲರಿಗೆ ನಾನು ಮಾಹಿತಿಯನ್ನು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ವಾದಿ ಪಾರ್ವತಿ ನನ್ನ ಪರವಾಗಿ ಮಾಡಿಕೊಟ್ಟಿರುವ ಮರಣ ಶಾಸನದ ಪ್ರಕಾರ ನಾನು ಈ ದಾವೆಯಲ್ಲಿ ಬಂದು ಸಾಕ್ಷ ನುಡಿಯುತ್ತೀದ್ದೇನೆ. ವಾದಿಯು ನನ್ನ ಪರವಾಗಿ ಯಾವುದೇ ಮರಣ ಶಾಸನವನ್ನು ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ಸದರಿ ಮರಣ ಶಾಸನವನ್ನು ನಾನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ಈ ದಾವೆಯನ್ನು ನನಗೆ ಬರಬೇಕಾದ ಜಾಗವನ್ನು ಪಡೆಯಲು ಹಾಕಲಾಗಿದೆ.

ವಾದಿಯು ಸರ್ವೆ ನಂ. 231 ಅ 16 ಗುಂಟೆ ಜಮೀನನ್ನು 1965 ರಲ್ಲಿ ಖರೀದಿಸಿರುತ್ತಾರೆ. ವಾದಿಯು 1965 ರಲ್ಲಿ ಜಮೀನನ್ನು ಖರೀದಿಸುವ ಕಾಲಕ್ಕೆ ಮೋಜಣಿ ಮಾಡಿಸಿಕೊಂಡಿರಲಿಲ್ಲ. ವಾದಿಯು ಮುನ್ಸಿಫ್ ನ್ಯಾಯಾಲಯದಲ್ಲಿ ಓ ಎಸ್ ನಂ. 35/1972 ನ್ನು ದಾಖಲು ಮಾಡಿದ ವಿಚಾರ ನನಗೆ ಗೊತ್ತಿರುತ್ತದೆ. ಸದರಿ ದಾವೆಯನ್ನು ವಾದಿಯು 16 ಗುಂಟೆ ಜಾಗದ ಸಲುವಾಗಿ ಹಾಕಿದ್ದರು. ಸದರಿ ದಾವೆಯಲ್ಲಿ ಪ್ರತಿವಾದಿಗಳಾಗಿ ಯಾರು ಯಾರು ಇದ್ದರು ಎಂದು ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ವಾದಿಯು ದಾವೆ ಸಲ್ಲಿಸುವ ಕಾಲಕ್ಕೆ ತಾನು ದಾವಾ ಸ್ವತ್ತಿನ ಸ್ವಾಧೀನ ಅನುಭವದಲ್ಲಿ ಇರುವ ಬಾಬ್ತು ರುಜುವಾತು ಪಡಿಸಲು ವಿವಾದಾಂಶ 4 ನ್ನು ನ್ಯಾಯಾಲಯವು ರಚಿಸಿದ ಬಾಬ್ತು ನನಗೆ ಮಾಹಿತಿ ಇರುವುದಿಲ್ಲ. ನ್ಯಾಯಾಲಯವು ಸದರಿ 4 ನೇ ವಿವಾದಾಂಶಕ್ಕೆ ವಾದಿಗೆ ಕಣ್ಣು ಕಾಣಿಸುವುದಿಲ್ಲ ಮತ್ತು ಕಿವಿ ಕೇಳಿಸುವುದಿಲ್ಲ ಎಂದು ಕಾರಣವನ್ನು ನೀಡಿರುತ್ತದೆ. ಸದರಿ ದಾವೆಯಲ್ಲಿ ನ್ಯಾಯಾಲಯವು 4 ನೇ ವಿವಾದಾಂಶಕ್ಕೆ ವಾದಿಯು ಕೇವಲ 8 ಗುಂಟೆ 12 ಆಣೆ ಜಾಗದಲ್ಲಿ

ಮಾತ್ರ ಸ್ವಾಧೀನ ಅನುಭವದಲ್ಲಿ ಇದ್ದಾರೆ ಎಂದು ಹೇಳಿರುತ್ತಾರೆ ಎಂದರೆ ಸಾಕ್ಷಿಯು 7 ಗುಂಟೆ 4 ಆಣೆ ನಮ್ಮ ಸ್ವಾಧೀನದಲ್ಲಿ ಇರುತ್ತದೆ ಎಂದು ನುಡಿದಿರುತ್ತಾರೆ.

ಓಎಸ್ ನಂ. 36/1972 ರ ದಾವೆಯು ವಜಾ ಆಯಿತು ಎಂದರೆ ನಿಜ. ಸದರಿ ದಾವೆಯ ವಾದಿಯು ತೀರ್ಪಿನ್ನು ಪ್ರಶ್ನಿಸಿ ಆರ್ ಎ ನಂ. 57/1985 ರಂತೆ ಮೇಲ್ಮನವಿ ಸಲ್ಲಿಸಿದ್ದರು ಎಂದರೆ ನಿಜ. ಸದರಿ ಮೇಲ್ಮನವಿಯು ವಜಾ ಆಯಿತು ಎಂದರೆ ಸರಿಯಲ್ಲ. ಜಿಲ್ಲಾ ನ್ಯಾಯಾಲಯದಲ್ಲಿ ಇತ್ಯರ್ಥ ಪಡಿಸಿಕೊಳ್ಳಿ ಎಂದು ಸದರಿ ಮೇಲ್ಮನವಿ ವಜಾ ಆಯಿತು. ವಾದಿಯು ತನ್ನ ಸ್ವಾಧೀನದಲ್ಲಿರುವ 8 ಗುಂಟೆ 12 ಆಣೆ ಪೈಕಿ 2 ಗುಂಟೆ 7 ಆಣೆ ಜಾಗವನ್ನು ನಾರಾಯಣ ನಾಗಪ್ಪರವರಿಗೆ ಮಾರಾಟ ಮಾಡಿದ್ದರು ಎಂದರೆ ಸರಿಯಲ್ಲ. ವಾದಿಯು ತನ್ನ ಸ್ವಾಧೀನದಲ್ಲಿರುವ 8 ಗುಂಟೆ 12 ಆಣೆ ಪೈಕಿ 3 ಗುಂಟೆ 13 ಆಣೆ ಜಮೀನನ್ನು ಲಕ್ಷ್ಮಿ ಬೊಮ್ಮಯ್ಯ ನಾಯ್ಕರಿಗೆ ಮಾರಾಟ ಮಾಡಿದ್ದರು ಎಂದರೆ ನಿಜ. ಅದೇ ರೀತಿ ವಾದಿಯು ತನ್ನ ಸ್ವಾಧೀನದಲ್ಲಿರುವ 8 ಗುಂಟೆ 12 ಆಣೆ ಪೈಕಿ 2 ಗುಂಟೆ 7.5 ಆಣೆ ಜಮೀನನ್ನು ನಾಗಪ್ಪ ಗೋವಿಂದ ನಾಯ್ಕರವರಿಗೆ ಮಾರಾಟ ಮಾಡಿದ್ದರು ಎಂದರೆ ನಿಜ. ಈ ರೀತಿ ವಾದಿಯು ತನ್ನ ಸ್ವಾಧೀನದಲ್ಲಿದ್ದಂತಹ 8 ಗುಂಟೆ 12 ಆಣೆ ಜಮೀನನ್ನು ಮಾರಾಟ ಮಾಡಿದ್ದರು ಎಂದರೆ ನಿಜ. ನಂತರ ವಾದಿಯ ಸ್ವಾಧೀನದಲ್ಲಿ ಯಾವುದೇ ಉಳಿಕೆ ಜಮೀನು ಇರಲಿಲ್ಲ ಎಂದರೆ ಸರಿಯಲ್ಲ.

ನಾರಾಯಣ ನಾಗಪ್ಪರವರಿಗೆ ಮಾರಾಟ ಮಾಡಿದ ಜಮೀನಿನ ಉತ್ತರಕ್ಕೆ 5 ಅಡಿ ಅಗಲದ ಕಾಲು ದಾರಿ ಇತ್ತು ಎಂದರೆ ಸಾಕ್ಷಿಯು ಮೊದಲೇ ಇತ್ತು ಎಂದು ನುಡಿದಿರುತ್ತಾರೆ. ನಮ್ಮ ಜಮೀನಿನ ನಕ್ಷೆಯ ಪ್ರಕಾರ ನಾವು ದಾವಾ ಸ್ವತ್ತಿಗೆ ಚೆಕ್ಕುಬಂದಿಯನ್ನು ಕೊಟ್ಟಿರುತ್ತೇವೆ. ಸದರಿ ನಕ್ಷೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇವೆ. ನಾವು ದಾವೆಯಲ್ಲಿ ನಮೂದು ಮಾಡಿರುವ ಚೆಕ್ಕುಬಂದಿಯು ಆಧಾರ ರಹಿತವಾಗಿ ಸುಳ್ಳು ಇರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯು ವಾದಿಗೆ ಸೇರಿಲ್ಲ ಎಂದರೆ ಸರಿಯಲ್ಲ. 1 ರಿಂದ 13 ನೇ ಪ್ರತಿವಾದಿಗಳ ಜಮೀನು 5 ಅಡಿ ಕಾಲು ದಾರಿಯ ಉತ್ತರಕ್ಕೆ ಇರುತ್ತದೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿರುವ ಶೆಡ್ಡಿಗೆ ನಂಬರ ಇರುವುದಿಲ್ಲ. ಸದರಿ ಶೆಡ್ಡಿನಲ್ಲಿ ಶೌಚಾಲಯ ಇರುವುದಿಲ್ಲ ಎಂದರೆ ನಿಜ. ಸಾಕ್ಷಿಯು ಮುಂದುವರೆದು ಸದರಿ ಶೆಡ್ಡನ್ನು ರೈತಾಬಿ ಕೆಲಸ ಮಾಡುವ ಸಲುವಾಗಿ ಮತ್ತು ಊಟ ಮಾಡುವ ಸಲುವಾಗಿ ಕಟ್ಟಿಸಲಾಗಿದೆ ಎಂದು ನುಡಿದಿರುತ್ತಾರೆ. ಸದರಿ ಶೆಡ್ಡಿನಲ್ಲಿ ವ್ಯವಸಾಯ ಪಂಪ್ ಸೆಟ್ ಇರುತ್ತದೆ ಎಂದರೆ ನಿಜ. ಸದರಿ ಪಂಪ್ ಸೆಟ್ ನಂ.ಐಪಿ 260 ಅಂತಾ ಇರುತ್ತದೆ ಎಂದರೆ ನಿಜ. ಸದರಿ ಪಂಪ್ ಸೆಟ್ 4 ನೇ ಪ್ರತಿವಾದಿ ಹೆಸರಿನಲ್ಲಿ ಇರುತ್ತದೆ ಎಂದರೆ ನಿಜ. ದಾವಾ ಸ್ವತ್ತಿನಲ್ಲಿರುವ ಶೆಡ್ಡಿನಲ್ಲಿ ವಾಸ ಮಾಡಲು ಆಗುವುದಿಲ್ಲ ಎಂದರೆ ನಿಜ. ದಾವಾ

ಆಸ್ತಿಯಲ್ಲಿರುವ ಶೆಡ್ಡನ್ನು 1 ರಿಂದ 4 ನೇ ಪ್ರತಿವಾದಿಗಳು ಕಟ್ಟಿರುವ ಶೆಡ್ಡಾಗಿರುತ್ತವೆ ಎಂದರೆ ಸಾಕ್ಷಿಯು ನಾವು ಕಟ್ಟಿರುವ ಶೆಡ್ಡನ್ನು ತೆರವು ಗೊಳಿಸಿ ಆ ರೀತಿ ಶೆಡ್ಡನ್ನು ಹಾಕಿರುತ್ತಾರೆ ಎಂದು ನುಡಿದಿರುತ್ತಾರೆ. ದಾವಾ ಆಸ್ತಿಯಲ್ಲಿ ನಾವು ಶೆಡ್ಡನ್ನು ಕಟ್ಟಿರುವ ಬಾಬ್ತು ಯಾವುದೇ ದಾಖಲಾತಿಗಳು ಇರುವುದಿಲ್ಲ. ನಾವು ದಾವಾ ಆಸ್ತಿಯಲ್ಲಿ ಶೆಡ್ಡನ್ನು ಕಟ್ಟಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿರುವ ಶೆಡ್ಡಿನಲ್ಲಿ ವಾದಿಯು ವಾಸಿಸುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ವಾದಿಯು ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ಡಬ್ಲ್ಯೂಪಿ ನಂ. 106000/2014 ನಂತೆ ಒಂದು ಕೇಸನ್ನು ಹಾಕಿದ್ದರು ಎಂದರೆ ನಿಜ. ಸದರಿ ಕೇಸನ್ನು ವಾದಿಯು ಜಾಗದ ಸಲುವಾಗಿ ಹಾಕಿದ್ದರು. ಸದರಿ ಕೇಸಿನಲ್ಲಿ ಮಾನ್ಯ ಉಚ್ಛ ನ್ಯಾಯಾಲಯವು ಸರ್ವೆ ಇಲಾಖೆಯವರಿಗೆ ಆಸ್ತಿಯನ್ನು ಅಳತೆ ಮಾಡಲು ಆದೇಶ ಮಾಡಿತ್ತು ಎಂದರೆ ನಿಜ. ವಾದಿಯು ಸದರಿ ಡಬ್ಲ್ಯೂಪಿ ನಂ. 106000/2014 ರಲ್ಲಿ ನ್ಯಾಯಾಂಗ ನಿಂದನೆ ಅರ್ಜಿಯನ್ನು ಸಲ್ಲಿಸಿದ್ದರು ಎಂದರೆ ನಿಜ. ನಂತರ ತಹಶೀಲ್ದಾರರು ಜಮೀನನ್ನು ಸರ್ವೆ ಮಾಡಿ ನ್ಯಾಯಾಲಯಕ್ಕೆ ವರದಿಯನ್ನು ಸಲ್ಲಿಸಿದ್ದರು ಎಂದರೆ ನಿಜ. ಸದರಿ ನಕ್ಷೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ಸಾಕ್ಷಿಯು ಮುಂದುವರೆದು ತಹಶೀಲ್ದಾರರು ತಮಗೆ ಬೇಕಾದಂತೆ ನಕ್ಷೆಯನ್ನು ತಯಾರಿಸಿಕೊಂಡು ಹೋಗಿರುತ್ತಾರೆ ಎಂದು ನುಡಿದಿರುತ್ತಾರೆ. ಸಾಕ್ಷಿಯು ಪುನಃ ಮುಂದುವರೆದು ತಹಶೀಲ್ದಾರರು ನಮ್ಮ ಜಾಗವನ್ನು ಸರ್ವೆ ಮಾಡಿಲ್ಲ ಎಂದು ನುಡಿದಿರುತ್ತಾರೆ. ಸದರಿ ವಿಚಾರವನ್ನು ಮಾನ್ಯ ಉಚ್ಛ ನ್ಯಾಯಾಲಯಕ್ಕೆ ನಾವು ತಿಳಿಸಿರುವುದಿಲ್ಲ. ಸದರಿ ತಹಶೀಲ್ದಾರರು ಜಮೀನನ್ನು ಸರ್ವೆ ಮಾಡಿದ ನಂತರ ನ್ಯಾಯಾಂಗ ನಿಂದನೆ ಅರ್ಜಿಯನ್ನು ಮುಕ್ತಾಯಗೊಳಿಸಲಾಯಿತು ಎಂದರೆ ನಿಜ. ಪ್ರತಿವಾದಿಗಳು 5 ಅಡಿ ಕಾಲುದಾರಿಯ ಉತ್ತರಕ್ಕೆ ಇರುವ ತಮ್ಮ ಜಾಗದಲ್ಲಿ ಕಂಪೌಂಡ್ ಗೋಡೆಯನ್ನು ಕಟ್ಟಿರುತ್ತಾರೆ ಎಂದರೆ ಸಾಕ್ಷಿಯು ನಮ್ಮ ಜಾಗವನ್ನು ಸೇರಿಸಿ ಕಂಪೌಂಡ್ ಕಟ್ಟಿರುತ್ತಾರೆ ಎಂದು ನುಡಿದಿರುತ್ತಾರೆ. ಪ್ರತಿವಾದಿಗಳು ತಮ್ಮ ಜಾಗದಲ್ಲಿ ಕಂಪೌಂಡ್ ಗೋಡೆ ಕಟ್ಟಿದ್ದರೂ ಸಹ ನಾವು ವಾದಿ ವಿರುದ್ಧ ಸುಳ್ಳು ದೂರನ್ನು ದಾಖಲು ಮಾಡಿರುತ್ತೇವೆ ಎಂದರೆ ಸರಿಯಲ್ಲ.

4 ನೇ ಪ್ರತಿವಾದಿ ಎಲ್ಲಿ ಕೆಲಸ ಮಾಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ. 4 ನೇ ಪ್ರತಿವಾದಿ ಎಲ್ಲಿ ಕೆಲಸ ಮಾಡುತ್ತಿದ್ದರು ಎಂದು ವಾದಿಗೂ ಸಹ ಗೊತ್ತಿಲ್ಲ ಎಂದರೆ ನಿಜ. ನಾವು ವಾದ ಪತ್ರದಲ್ಲಿ 4 ನೇ ಪ್ರತಿವಾದಿ ವಿರುದ್ಧ ಸುಳ್ಳು ಆಪಾದನೆಯನ್ನು ಹೊರಿಸಿದ್ದೇವೆ ಎಂದರೆ ಸರಿಯಲ್ಲ. ಈ ದಾವೆಯನ್ನು ಸಲ್ಲಿಸಲು ನಮಗೆ ಯಾವುದೇ ಕಾರಣ ಉಂಟಾಗಿಲ್ಲ ಎಂದರೆ ಸರಿಯಲ್ಲ.

ಪ್ರತಿವಾದಿಗಳು ನಮಗೆ ಸೇರಿದ ಜಾಗವನ್ನು ಅತಿಕ್ರಮಣ ಮಾಡಿದ್ದಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತೀದ್ದೇನೆ ಎಂದರೆ ಸರಿಯಲ್ಲ. ದಾವೆಯಲ್ಲಿ ಕೇಳಿರುವ ಪರಿಹಾರಕ್ಕೆ ನಾವು ಅರ್ಹರಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ಸೇರಿದ ಜಮೀನನ್ನು ಕಬಳಿಸಲು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಪ್ರಮಾಣ ಪತ್ರ ಹಾಕಿಸಿ ಸುಳ್ಳು ಸಾಕ್ಷಿ ನುಡಿಯುತ್ತೀದ್ದೇನೆ ಎಂದರೆ ಸರಿಯಲ್ಲ.

**ಪಾಟಿ ಸವಾಲುಃ 5 ರಿಂದ 8, 10 ಮತ್ತು12 ನೇ ಪ್ರತಿವಾದಿಗಳಿಂದಃ**

ಸದರಿ ಪ್ರತಿವಾದಿಗಳ ವಿರುದ್ಧ ಕೇಸು ವಜಾ ಆಗಿರುತ್ತದೆ.

ಮರು ವಿಚಾರಣೆ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಕಾರವಾರ.